ಬರವಣಿಗೆ ಮಾಡಲು ಸಾಧ್ಯವಿಲ್ಲ. ಇಂತಿಷ್ಟು ಪುಟಗಳ ಮಿತಿ ಎಂಬುದು ಕೂಡ ನನಗೆ ಒಗ್ಗುವುದಿಲ್ಲ. ಅಣೆಕಟ್ಟು ಮತ್ತು ಒಡ್ಡುಗಳ ತಾಪಾತ್ರಯವಿಲ್ಲದೇ ನನ್ನ ಪಾಡಿಗೆ ನಾನು ನಲಿಯುತ ಪ್ರವಹಿಸಬೇಕು, ಹರಿಯಬೇಕು; ಮರದ ಕಾಂಡದ ಮೇಲೆ ಚಿತ್ರವನ್ನು ಕೊರೆಯುತ ಸಾಗಬೇಕು, ಬಂಡೆಯ ಒಡಲನ್ನು ನುಣ್ಣಗೆ ಮಾಡಿ ವಿಚಿತ್ರ ಆಕೃತಿಯನ್ನು ನಿರ್ಮಿಸುತ್ತ, ಕಾಡಿನ ತಂಪಿನಲ್ಲಿ ಬೆಟ್ಟದ ಬಗಲಲ್ಲಿ ಜುಳುಜುಳು ಎನ್ನಬೇಕು. ಸಮತಟ್ಟಾಗಿ ಹರಿದು ಮರಳುಗಾಡಿನಲ್ಲಿ ಗುಪ್ತಗಾಮಿನಿ ಒರತೆಯಾಗಬೇಕು. ಉತ್ತರದಕ್ಷಿಣ ಧ್ರುವಗಳ ನೀರ್ಗಲ್ಲ ಬಂಡೆಯಾಗಿ ಜೀವನದ ಕತೆಯನ್ನು ಹಾಡುತ್ತ ಬದುಕಿನ ಪಯಣದ ಅನುಭವದ ಮುತ್ತುಗಳನ್ನು ಎರಡು ಕೈಯಲ್ಲಿ ಎರಚುತ್ತ ಸಾಗಬೇಕು. ಓದುಗರು ನೇರವಾಗಿ ಆಯ್ದುಕೊಳ್ಳಲಿ ಅಥವಾ ಶಬ್ದಾರ್ಥಗಳ ಗೊಡವೆ ಬೇಡವೆಂದು ಅಂತರಾರ್ಥದ ಧಮನಿಗಳಲ್ಲಿ ಜೀವದ್ರವ್ಯವನ್ನು ಮೊಗೆಯಲಿ ಅಥವಾ ಕಬ್ಬಿನಂತೆ ರಸ ಹೀರಿ ಸಿಪ್ಪೆಯನ್ನು ಎಸೆಯಲಿ. ಓದುಗರಿಗೆ ಅನಿಸಿದ್ದನ್ನು ಬರಹಗಾರರಿಗೆ ತಲುಪಿಸುವ ವ್ಯವಸ್ಥೆಯೊಂದು ಇರಬೇಕು ಎಂಬುದು ನನ್ನ ನಿರೀಕ್ಷೆ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳು ಈ ಸಂವಹನವನ್ನು ಸಾಧ್ಯ ಮಾಡಿವೆ. ಓದುಗ ಮತ್ತು ಬರಹಗಾರರ ನಡುವೆ ಸಕ್ಷಮವಾದ ಸಂವಹನದ ಬಾಂಧವ್ಯ ಇರಬೇಕು. ಓದುಗರ ನಿರೀಕ್ಷೆ ಮತ್ತು ಅಪೇಕ್ಷೆಗಳ ಸೂಕ್ಷ್ಮತೆಯ ಸಂದೇಶವು ಬರಹಗಾರರಿಗೆ ಅಗತ್ಯ.

ಕತೆಯು ತೀರಾ ಆಳವಾಗಿ ನನ್ನೆದೆಯಲ್ಲಿ ಬೇರುಬಿಟ್ಟು ಇಡೀ ನನ್ನ ಅಸ್ತಿತ್ವವನ್ನು ಆವರಿಸಿದಾಗ ಮತ್ತು ಅದರ ಸಂಪೂರ್ಣತೆಯು ನನ್ನೆದುರಿಗೆ ಸ್ಪಷ್ಟವಾಗಿ ನನ್ನ ಅಂಗೈಗೆರೆಗಳಂತೆ ಕಂಡುಬಂದಾಗ ಮಾತ್ರ ನನಗೆ ಬರೆಯಲು ಸಾಧ್ಯವಾಗುತ್ತದೆ. ತಿಣುಕಿ ತಿಣುಕಿ ಹಲವು ದಿನ, ತಿಂಗಳುಗಳವರೆಗೆ ಬರೆದರೆ ಅದು ನನ್ನ ಒಳ್ಳೆಯ ಕತೆಯಾಗುವುದಿಲ್ಲ. ನಾನು ಒಮ್ಮೆ ಬರೆದ ಕತೆಯನ್ನು ತಿದ್ದಿ ತೀಡುವುದಿಲ್ಲ. ಹಾಗೆ ಒಮ್ಮೆ ಮೂಡಿಬಂದ ಕತೆಯು ನವಜಾತ ಶಿಶುವಿನಂತೆ ತನ್ನದೇ ಆದ ವೈಶಿಷ್ಟತೆಯಿಂದ ಕೂಡಿರುತ್ತದೆ. ನಾನು ಅದರ ಹಣೆಯನ್ನು ನೀವುವುದಿಲ್ಲ, ಮೊಂಡು ಮೂಗನ್ನು ಎತ್ತರಿಸುವುದಿಲ್ಲ, ಅದರ ಕಣ್ಣಿನ ಚೆಲುವನ್ನು ಭಂಗಗೊಳಿಸುವುದಿಲ್ಲ, ಅದು ಅದಾಗಿಯೇ ಇರುತ್ತದೆ. ನನಗೆ ಎಂದಿಗೂ ಕೂಡ ಕತೆಯನ್ನು ಬರೆದ ನಂತರ ಇದನ್ನು ಬೇರೆ ರೀತಿಯಲ್ಲಿ ಬರೆಯಬಹುದಿತ್ತು ಎಂದು ಅನಿಸುವುದಿಲ್ಲ. ನಾನು ಆ ಕತೆಗೆ ನನ್ನ ಸಂಪೂರ್ಣತೆಯನ್ನು ವಿನಿಯೋಗಿಸಿರುತ್ತೇನೆ. ಹೀಗಾಗಿ ನನಗೆ ಯಾವ ಅತೃಪ್ತಿಗಳು ಕಾಡುವುದಿಲ್ಲ. ಆ ಕತೆಯಲ್ಲಿ ನಾನು ಏನನ್ನು ಹೇಳಬೇಕೆಂದು ಆಲೋಚಿಸಿದ್ದೆನೋ ಆ ಕೇಂದ್ರ ಬಿಂದುವಿಗೆ ಉಳಿದ ಎಲ್ಲಾ ಅಂಶಗಳು ಪೂರಕವಾಗಿರುವಂತೆ ಮನೋಲೋಕವೊಂದು ಸೃಷ್ಟಿಯಾಗಿರುತ್ತದೆ. ಆದರೆ ಬರವಣಿಗೆ ಸಾಗಿದಂತೆ ಅದು ಬೇರೆ ಬೇರೆ ಸ್ವರೂಪವನ್ನು ಕೂಡಾ ಪಡೆಯಬಹುದು.

ನನಗೆ ನನ್ನ ಕತೆಗಳ ಮಿತಿ ಗೊತ್ತಿಲ್ಲ. ನನ್ನದೊಂದು ಒಳ ಲೋಕವಿದೆ; ಅದರ ಕನಸುಗಳಿವೆ, ಅದರ ವಾಸ್ತವತೆ, ಬೆರಗು ಅಮಾಯಕತೆ ಎಲ್ಲವೂ ಇದೆ. ಯಾರಾದರೂ ನನ್ನೊಡನೆ ಬಂದು ಆತ್ಮೀಯವಾಗಿ ಆ ಲೋಕದ ಸುತ್ತು ಹಾಕಲು ಇಷ್ಟ ಪಟ್ಟಲ್ಲಿ ನಾನು ಅವರ ಜೊತೆಗಿರುತ್ತೇನೆ. ನಾನು ಸಿದ್ಧಾಂತ ಮತ್ತು ಸೂತ್ರಗಳಿಗೆ ಒಗ್ಗುವುದಿಲ್ಲ. ಒಂದು ದೃಷ್ಟಾಂತದ ಮೂಲಕ ಹೇಳುವುದಾದರೆ – ಒಬ್ಬ ದೊರೆ ಇದ್ದ. ಅವನಿಗೆ ಆಫ್ರಿಕನ್ ಬುಡಕಟ್ಟಿನ ದಾಸಿಯೊಬ್ಬಳಿದ್ದಳು. ಒಂದು ದಿನ ಆ ದೊರೆಯು ಒಂದು ರತ್ನ ಹಾರ ನೀಡಿ ಪ್ರಪಂಚದ ಅತ್ಯಂತ ಸುಂದರವಾದ ಮಗುವಿನ ಕೊರಳಿಗೆ ಆ ಹಾರವನ್ನು ತೊಡಿಸುವಂತೆ ಹೇಳಿದ. ಆಕೆ ಸೀದಾ ತನ್ನ ಮನೆಗೆ ಹೋಗಿ ತನ್ನ ಮಗುವಿಗೆ ತೊಡಿಸಿದಳು. ನನ್ನ ಕತೆಗಳು ಅಪ್ರತಿಮ ಹಾಗೂ ಕನ್ನಡ ಕಥಾ ಪರಂಪರೆಯಲ್ಲಿ